**ದಿಃ12.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಬಿ ಎಸ್ ವಕೀಲರಿಂದಃ

ದಾವಾ ಆಸ್ತಿಗಳನ್ನು ನನ್ನ ಅಜ್ಜ ಮತ್ತು ಅಜ್ಜಿ ಖರೀದಿ ಮಾಡುವ ಮೊದಲು ನನ್ನ ಅಜ್ಜ ಅದರ ಗೇಣಿದಾರರಾಗಿದ್ದರು ಎಂದರೆ ನಿಜ. ಆ ರೀತಿ ಖರೀದಿ ಆಗುವ ಎಷ್ಟು ವರ್ಷ ಮೊದಲು ನನ್ನ ಅಜ್ಜ ಗೇಣಿದಾರರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜನ ಗೇಣಿ ಮಾಲಿಕರು ಯಾರು ಎಂದರೆ ಸಾಕ್ಷಿ ಶ್ರೀನಿವಾಸ್ ಎಂದು ನುಡಿಯುತ್ತಾರೆ. ನನ್ನ ಅಜ್ಜ ಶ್ರೀನಿವಾಸ್ ರವರಿಗೆ ವಾರ್ಷಿಕ ಎಷ್ಟು ಗೇಣಿ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಜ್ಜನಿಗೆ ಕ್ರಯ ಆಗುವ ಸಂದರ್ಭದಲ್ಲಿ ನನ್ನ ತಾಯಿಗೆ ಮದುವೆ ಆಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ಹಾಗೂ ಅಜ್ಜಿ ಕ್ರಯಕ್ಕೆ ತೆಗದುಕೊಂಡ ಎಷ್ಟು ವರ್ಷಗಳ ನಂತರ ನನ್ನ ತಾಯಿ ಮದುವೆಯಾಯಿತು ಎಂದರೆ ಸಾಕ್ಷಿ **6** ರಿಂದ **7** ವರ್ಷ ಎಂದು ನುಡಿಯುತ್ತಾರೆ. ನನ್ನ ಅಜ್ಜ ಹಾಗೂ ಅಜ್ಜಿಗೆ ದಾವಾ ಆಸ್ತಿಯ ಆದಾಯ ಅಲ್ಲದೇ ಬೇರೆ ಯಾವ ಉತ್ಪತ್ತಿ ಇರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನನ್ನ ಅಜ್ಜ ಹಾಗೂ ಅಜ್ಜಿಗೆ ದಾವಾ ಆಸ್ತಿ ಆದಾಯ ಅಲ್ಲದೇ ಬೇರೆ ಏನು ಆದಾಯ ಇತ್ತು ಎಂದರೆ ಸಾಕ್ಷಿ ದಾವಾ ಆಸ್ತಿಯಲ್ಲಿ ಗೇಣಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ದಾವಾ ಆಸ್ತಿಯಲ್ಲಿ ನನ್ನ ಅಜ್ಜ ಹಾಗೂ ಅಜ್ಜಿ ಖರೀದಿ ಮಾಡುವ ಸಮಯದಲ್ಲಿ ಏನು ಬೆಳೆಯುತ್ತಿದ್ದರು ಎಂದರೆ ಸಾಕ್ಷಿ ಭತ್ತ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ವಾರ್ಷಿಕವಾಗಿ ಎಷ್ಟು ಬೆಳೆ ಬೆಳೆಯುತ್ತಿತ್ತು ಎಂದರೆ ಸಾಕ್ಷಿ ಮೂರು ಮೂಟೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ಅಜ್ಜ ಹಾಗೂ ಅಜ್ಜಿ ವಾಸ ಮಾಡುತ್ತಿದ್ದ ಮನೆ ಇತ್ತು ಎಂದರೆ ನಿಜ. ನನ್ನ ತಾಯಿ ದಾವಾ ಆಸ್ತಿಯ ಪ್ರತ್ಯೇಕ ಮನೆಯಲ್ಲಿ ವಾಸಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈಗ ಎಂದು ಕೇಳಲಾಗಿ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನನ್ನ ತಾಯಿ ವಾಸ ಮಾಡುತ್ತಿರುವ ಮನೆ ದಾವಾ ಆಸ್ತಿಯಲ್ಲಿಯೇ ಇದೆ ಎಂದರೆ ನಿಜ. ಆ ರೀತಿ ಎಷ್ಟು ವರ್ಷಗಳಿಂದ ನನ್ನ ತಾಯಿ ವಾಸಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ **35** ರಿಂದ **40** ವರ್ಷ ಎಂದು ನುಡಿಯುತ್ತಾರೆ.

ನನ್ನ ತಂದೆ ವಾಸ ಇರುವುದು ಶಂಭೂರು ಗ್ರಾಮದ ಮಂಜನಕೋಡಿ ಎಂದರೆ ನಿಜ. ಸದರಿ ಮನೆ ದಾವಾ ಆಸ್ತಿಯಿಂದ ಎಷ್ಟು ದೂರದಲ್ಲಿದೆ ಎಂದರೆ ಸಾಕ್ಷಿ 7 ರಿಂದ 8 ಕಿ.ಮೀ. ಎಂದು ನುಡಿಯುತ್ತಾರೆ. ನನ್ನ ತಂದೆ ಯಾವಾಗ ಮೃತಪಟ್ಟರು ಎಂದರೆ ಸಾಕ್ಷಿ 35 ವರ್ಷ ಎಂದು ನುಡಿಯುತ್ತಾರೆ.

ನನ್ನ ತಂದೆ ಹಾಗೂ ತಾಯಿಯ ಮದುವೆಯಾಗಿ 60 ವರ್ಷ ಆಗಿದೆ ಎಂದರೆ ಸಾಕ್ಷಿ 60 ರಿಂದ 70 ಇರಬಹುದು ಎಂದು ನುಡಿಯುತ್ತಾರೆ. ನಾನು ನನ್ನ ತಂದೆಗೆ ಎಷ್ಟನೇ ಮಗ ಎಂದರೆ ಸಾಕ್ಷಿ ಮದ್ಯದ ಮಗ ಎಂದು ನುಡಿಯುತ್ತಾರೆ. ನನ್ನ ಅಣ್ಣ ಇದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ ನನಗಿಂತ ಎಷ್ಟು ವರ್ಷ ದೊಡ್ಡವರು ಎಂದರೆ ಸಾಕ್ಷಿ 3 ವರ್ಷ ಎಂದು ನುಡಿಯುತ್ತಾರೆ. ನನ್ನ ಅಣ್ಣನ ಹೆಂಡತಿ ನನ್ನ ತಾಯಿಯ ಜೊತೆ ದಾವಾ ಆಸ್ತಿಯ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ನಿಜ. ನನ್ನ ತಂದೆ ತಾಯಿ ಮದುವೆಯಾದ ಎಷ್ಟು ವರ್ಷದ ನಂತರ ನನ್ನ ಅಣ್ಣ ಹುಟ್ಟಿರುತ್ತಾರೆ ಎಂದರೆ ಸಾಕ್ಷಿ 1 ವರ್ಷ ಎಂದು ನುಡಿಯುತ್ತಾರೆ.

ನನ್ನ ತಾಯಿ ಮದುವೆಯಾದ ನಂತರ ಶಂಭೂರಿನಲ್ಲಿ ನನ್ನ ತಂದೆಯೊಂದಿಗೆ ವಾಸವಾಗಿದ್ದರು ಎಂದರೆ ನಿಜ. ನನ್ನ ತಾಯಿ ನನ್ನ ತಂದೆಯನ್ನು ಬಿಟ್ಟು ದಾವಾ ಆಸ್ತಿಯ ಮನೆಯಲ್ಲಿ ಯಾವ ಕಾರಣಕ್ಕೆ ವಾಸ ಮಾಡುತ್ತಿದ್ದಾರೆ ಎಂದರ ಸಾಕ್ಷಿ ನನ್ನ ತಂದೆಯ ಮನೆಯವರು ಹೊರ ಹಾಕಿದ ಕಾರಣ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಪ್ರತ್ಯೇಕವಾದ ಕೆಲಸ ಹಾಗೂ ಆದಾಯ ಇಲ್ಲ ಎಂದರೆ ನಿಜ.

ನಿಪಿ-3 ರಿಂದ 11ರಲ್ಲಿ ತೋರಿಸಿರುವ ವಿಚಾರಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವ್ಯಾಜ್ಯ ಮಾಡುವ ಸಂದರ್ಭದಲ್ಲಿ ನಿಪಿ-3 ರಿಂದ 11ರಲ್ಲಿ 10 ರಿಂದ 14 ನೇ ಪ್ರತಿವಾದಿಯರ ಹೆಸರು ಯಾವ ಆಧಾರದಲ್ಲಿ ಬಂದಿದ್ದಾರೆ ಎಂದು ತಿಳಿದುಕೊಂಡಿದ್ದಾರಾ ಎಂದರೆ ಸಾಕ್ಷಿ ತಂದೆ ತಾಯಿ ನಂತರ ಬಂದಿರುವುದಾಗಿ ನುಡಿಯುತ್ತಾರೆ. ಸದರಿ ಪಹಣಿ ಸರಿ ಇಲ್ಲ ಎಂದು ಮೇಲ್ಮನವಿ ಸಲ್ಲಿಸಿಲ್ಲವಾ ಎಂದರೆ ಸಾಕ್ಷಿ: ಇಲ್ಲ ಎಂದು ನುಡಿಯುತ್ತಾರೆ. 10 ರಿಂದ 14ನೇ ಪ್ರತಿವಾದಿರ ಹೆಸರಿನಲ್ಲಿ ಪಹಣಿ ಬರುವ ಮೊದಲು ಬೇರೆ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ವೆಂಕಪ್ಪ ಪೂಜಾರಿ, ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಎಂದು ನುಡಿಯುತ್ತಾರೆ. ಸದರಿಯವರ ಹೆಸರು ಪಹಣಿಯಲ್ಲಿ ಯಾವ ವರ್ಷದಿಂದ ಬರುತ್ತಿತ್ತು ಎಂದರೆ ಸಾಕ್ಷಿ 2012ರಿಂದ ಎಂದು ನುಡಿಯುತ್ತಾರೆ. ಸದರಿಯವರ ಹೆಸರಿನಲ್ಲಿ ಪಹಣಿ ಬರಲು ಯಾರು ಅರ್ಜಿ ಕೊಟ್ಟಿದ್ದರು ಎಂದರೆ ಸಾಕ್ಷಿ ವೆಂಕಪ್ಪ ಪೂಜಾರಿಯ ಮಕ್ಕಳು ಎಂದು ನುಡಿಯುತ್ತಾರೆ. 2012ರಲ್ಲಿ ಬರುತ್ತಿದ್ದ ಪಹಣಿ ಪತ್ರಿಕೆ ಸಹ ನನ್ನ ತಾಯಿ ಮೇಲ್ಮನವಿ ಮುಖಾಂತರ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಇಲ್ಲ ಆದರೆ ವೆಂಕಪ್ಪ ಪೂಜಾರಿ ದೊಡ್ಡವರಾದ ಕಾರಣ ಎಲ್ಲಾ ಅವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

ನಿಪಿ-3 ರಿಂದ 11ರ ಆಸ್ತಿಯ ಕುರಿತು ಎಲ್ಲಾದರೂ ಆಧಾರ ಮಾಡಿ ಸಾಲ ಪಡೆದಿದ್ದಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಸಾಲವನ್ನು ಯಾರು ಎಷ್ಟು ಪಡೆದಿದ್ದಾರೆ ಎಂದರೆ ಸಾಕ್ಷಿ ವೆಂಕಪ್ಪ ಪೂಜಾರಿ ಮಕ್ಕಳು ಪಡೆದಿದ್ದು ಎಷ್ಟು ಹಣ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ಯಾವ ಸೊಸೈಟಿಯಿಂದ ಸದರಿ ಹಣ ಪಡೆದಿದ್ದಾರೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ತಾಯಿ ಬ್ಯಾಂಕ್ ಅಥವಾ ಸೊಸೈಟಿಗೆ ಹೋಗಿ ಆಕ್ಷೇಪ ಸಲ್ಲಿಸಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಪಿ-1ಕ್ಕೆ ಯಾರು ಮಾಹಿತಿ ಕೊಟ್ಟಿರುವುದು ಎಂದರೆ ಸಾಕ್ಷಿ ತಾನು ತಾಲೂಕು ಕಚೇರಿಯಿಂದ ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ಅದನ್ನು ದಾವೆ ಹಾಕುವ ಎಷ್ಟು ಸಮಯಕ್ಕೆ ಪಡೆದಿರುವುದು ಎಂದರೆ ಸಾಕ್ಷಿ 8 ತಿಂಗಳು ಎಂದು ನುಡಿಯುತ್ತಾರೆ. ಸಾಕ್ಷಿ ಹಾಕುವ ಕಾಲಕ್ಕೆ ನಾನು ನನ್ನ ತಾಯಿಯಿಂದ ಮಾಹಿತಿ ಪಡೆದಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಸಂಗತಿ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ನಾನು ಅವರಿಂದ ನಿಪಿ-1ನ್ನು ಪಡೆದಿರುತ್ತೇನೆ ಎಂದರೆ ಸುಳ್ಳು.

ದಾವಾ ಆಸ್ತಿಯ ಬಳಿ ಕಾಂತಿಲ ಶಂಕರ ರಾವ್ ಇವರ ಆಸ್ತಿ ಇದೆಯಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನನಗೆ ಸದರಿ ಕಾಂತಿಲ ಶಂಕರ ರಾವ್ ಇವರ ಪರಿಚಯ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ದಾವಾ ಆಸ್ತಿಗೆ ಹೊಂದಿಕೊಂಡಂತೆ ಯಾರ ಆಸ್ತಿ ಇದೆ ಎಂದರೆ ಸಾಕ್ಷಿ ಶೀನ ಪೂಜಾರಿ ಎಂದು ನುಡಿಯುತ್ತಾರೆ. ಪ್ರತಿವಾದಿ ಸಲ್ಲಿಸಿರುವ ತಕರಾರಿನಲ್ಲಿ ಕಾಂತಿಲ ಶಂಕರ ರಾವ್ ಇವರ ಹೆಸರು ನಮೂದಿಸಿರುವ ವಿಚಾರ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯ ಬಳಿ ಸದರಿ ಕಾಂತಿಲ ಶಂಕರ ರಾವ್ ಯಾರು ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನನ್ನ ಅಜ್ಜ ಅಜ್ಜಿ ವಾಸಿಸಿಕೊಂಡು ಬರುತ್ತಿದ್ದ ಮನೆಯಲ್ಲಿ ಮೊದಲು ವೆಂಕಪ್ಪ ಪೂಜಾರಿ ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಒಟ್ಟಾಗಿ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಯಾವ ವರ್ಷದ ವರೆಗೂ ಒಟ್ಟಾಗಿ ವಾಸಿಸುತ್ತಿದ್ದರು ಎಂದರೆ ಸಾಕ್ಷಿ 1990 ಎಂದು ನುಡಿಯುತ್ತಾರೆ. ವೆಂಕಪ್ಪ ಪೂಜಾರಿ ಮೃತಪಟ್ಟ ನಂತರ ಸದರಿ ಮನೆಯಲ್ಲಿ ಅವರ ಮಕ್ಕಳು ವಾಸಿಸುತ್ತಿದ್ದರು ಎಂದರೆ ನಿಜ.

ನಾನು ಏನು ಕೆಲಸ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ಪೈಂಟಿಂಗ್ ಕೆಲಸ ಎಂದು ನುಡಿಯುತ್ತಾರೆ. ನಾನು ಏನು ಓದಿದ್ದೇನೆ ಎಂದರೆ ಸಾಕ್ಷಿ 10ನೇ ತರಗತಿ ಎಂದು ನುಡಿಯುತ್ತಾರೆ. ನಾನು ಕಾಪೂರಿನಲ್ಲಿ ಎಷ್ಟು ವರ್ಷಗಳಿಂದ ಖಾಯಂ ವಾಸ ಇದ್ದೇನೆ ಎಂದರೆ ಸಾಕ್ಷಿ 15 ವರ್ಷ ಎಂದು ನುಡಿಯುತ್ತಾರೆ. ಅದಕ್ಕೂ ಮೊದಲು ಎಲ್ಲಿ ವಾಸ ಇದ್ದೆ ಎಂದರೆ ಸಾಕ್ಷಿ ಬಾಳ್ತಿಲ

ಗ್ರಾಮದ ಕೋರಿಯಾ ಎಂದು ನುಡಿಯುತ್ತಾರೆ. ನಾನು ಕೋರಿಯಾ ಗ್ರಾಮದಲ್ಲಿ ವಾಸಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರುಮಾಡಬಹುದಾ ಎಂದರೆ ಸಾಕ್ಷಿ ಮಾಡಬಹುದು ಎಂದು ನುಡಿಯುತ್ತಾರೆ.

ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಲಾಗಿರುತ್ತದೆ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಟ್ವಾಳ.**